# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 633 |
| ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 13.12.2024. |

******

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಳೆದ ಮೂರು ವರ್ಷದ ಅವಧಿಯಲ್ಲಿ ಎಷ್ಟು ಬಾಲ್ಯ ವಿವಾಹಗಳ ಪ್ರಕರಣಗಳು ನಡೆದಿದೆ: (ಜಿಲ್ಲಾವಾರು ಮಾಹಿತಿ ಒದಗಿಸುವುದು)</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ನಡೆದಿರುವ ಬಾಲ್ಯವಿವಾಹಗಳ ಪ್ರಕರಣಗಳ ವಿವರ<br><table><tr><td>2021-22</td><td>2022-23</td><td>2023-24</td></tr><tr><td>418</td><td>328</td><td>719</td></tr></table><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.</td></tr>
<tr><td>ಆ)</td><td>18 ವರ್ಷದೊಳಗಿನ ಮಕ್ಕಳ ರಕ್ಷಣೆಗೆ ಇರುವ ಕಾನೂನುಗಳು ಯಾವುವು: ಮಕ್ಕಳ ಮೇಲೆ ಆಗುತ್ತಿರುವ ದೌರ್ಜನ್ಯ ಹಾಗೂ ಬಾಲ್ಯ ವಿವಾಹಗಳನ್ನು ತಡೆಯಲು ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಹಾಗೂ ಈ ಕಾರ್ಯಕ್ರಮಗಳು ಸಾರ್ವಜನಿಕರಿಗೆ ತಲುಪುತ್ತಿದೆಯೇ ಎಂಬುದನ್ನು ಗಮನಿಸುತ್ತಿರುವ ಅಧಿಕಾರಿಗಳು ಯಾರು ಯಾರು;</td><td>18 ವರ್ಷದೊಳಗಿನ ಮಕ್ಕಳ ರಕ್ಷಣೆಗೆ ಇರುವ ಕಾನೂನುಗಳು:<br>• ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015<br>• ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ತಿದ್ದುಪಡಿ ಕಾಯ್ದೆ 2021, 2016ರ ಮಾದರಿ ನಿಯಮಗಳು.<br>• ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೋ) ಕಾಯ್ದೆ-2012 ನಿಯಮಗಳು -2020<br>• ಬಾಲ್ಯ ವಿವಾಹ ನಿಷೇಧಕಾಯ್ದೆ-2006,<br>• ಬಾಲ್ಯ ವಿವಾಹ ನಿಷೇಧ (ಕರ್ನಾಟಕ) ನಿಯಮಗಳು-2014.<br>• ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ-2016<br>• ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ-1986<br>• ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ (ತಡೆಗಟ್ಟುವಿಕೆ) ಕಾಯ್ದೆ-1956<br>ಮಕ್ಕಳ ಮೇಲೆ ಆಗುತ್ತಿರುವ ದೌರ್ಜನ್ಯ ಹಾಗೂ ಬಾಲ್ಯವಿವಾಹಗಳನ್ನು ತಡೆಯಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು:<br>• ಮಕ್ಕಳ ಸಹಾಯವಾಣಿ-1098 24*7 ಮಕ್ಕಳ ಸುರಕ್ಷತೆಗಾಗಿ ಕಾರ್ಯನಿರ್ವಹಿಸುತ್ತಿದೆ. ಸಂಕಷ್ಟದಲ್ಲಿರುವ ಮಗುವಿನ ಬಗ್ಗೆ ಯಾವುದೇ ಸಮಯದಲ್ಲಿ ಕರೆ ಸ್ವೀಕೃತವಾದರೂ ತಕ್ಷಣ ಮಗುವನ್ನು ರಕ್ಷಿಸಲು ಸಂಬಂಧಿಸಿದ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಿರುತ್ತಾರೆ.</td></tr>
</table>

- ಮಕ್ಕಳ ರಕ್ಷಣಾ ಕಾರ್ಯಕ್ರಮಗಳ ಕುರಿತು ಮಾನ್ಯ ಇಲಾಖಾ ಸಚಿವರ ಸಂದೇಶವನ್ನು ಆಕಾಶವಾಣಿ ಮೂಲಕ ದಿನಾಂಕ:16.09.2024 ರಿಂದ 15-10-2024ರ ವರೆಗೆ ಪ್ರಸಾರ ಮಾಡಲಾಗಿದೆ.

- ದಿನಾಂಕ: 11.08.2024 ರಿಂದ "ವಾತ್ಸಲ್ಯವಾಣಿ ಎಂಬ 13 ವಾರಗಳ ಸರಣಿ ಕಾರ್ಯಕ್ರಮವನ್ನು ಆಕಾಶವಾಣಿ ಮೂಲಕ ಪ್ರಸಾರ ಮಾಡಲಾಗುತ್ತಿದ್ದು, ಈ ಕಾರ್ಯಕ್ರಮದಲ್ಲಿ ಮಾನ್ಯ ಇಲಾಖಾ ಸಚಿವರು, ಇಲಾಖಾ ಕಾರ್ಯದರ್ಶಿಗಳು, ನಿರ್ದೇಶಕರು ಸೇರಿದಂತೆ ಹಲವು ಅಧಿಕಾರಿಗಳು ಭಾಗವಹಿಸಿ ಜಾಗೃತಿ ಮೂಡಿಸಿದ್ದಾರೆ.

- ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು, ವಿವಿಧ ಇಲಾಖೆಗಳು ಮತ್ತು ಸಾರ್ವಜನಿಕರಿಗೆ ಒಟ್ಟು 697 ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ಸುಮಾರು 575349 ಭಾಗೀದಾರರು ಸಾರ್ವಜನಿಕರು ಒಳಗೊಂಡಂತೆ ಪ್ರಯೋಜನ ಪಡೆದಿರುತ್ತಾರೆ. **(ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ)**

- ಪ್ರತಿ ಜಿಲ್ಲೆಯಲ್ಲೂ ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ಮಕ್ಕಳ ವಿಶೇಷ ಪೊಲೀಸ್ ಘಟಕ, ಮಕ್ಕಳ ಪಾಲನಾ ಸಂಸ್ಥೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಪಾಲನೆ/ ಪೋಷಣೆ ಅವಶ್ಯಕತೆ ಇರುವ ಮಕ್ಕಳು ಮತ್ತು ಕಾನೂನು ಸಂಘರ್ಷಕ್ಕೊಳಗಾದ ಮಕ್ಕಳ ಪುನರ್ವಸತಿಗೋಸ್ಕರ ಕಾರ್ಯನಿರ್ವಹಿಸುತ್ತಿವೆ.

- ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳ ಕಾವಲುಸಮಿತಿಯನ್ನು ರಚಿಸಲಾಗಿದೆ.

- ಬಾಲಗರ್ಭಿಣಿಯರ ಪ್ರಕರಣಗಳಿಗೆ ಸಂಬಂಧಿಸಿದಂತೆ, ದಿನಾಂಕ:06.09.2024ರ ಸರ್ಕಾರದ ಆದೇಶದಂತೆ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಬಾಲಗರ್ಭಿಣಿಯರಾಗುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ವಿವಿಧ ಇಲಾಖೆಗಳಿಗೆ ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ.

- ಬಾಲಗರ್ಭಿಣಿಯರ ಪ್ರಕರಣಗಳನ್ನು ತಡೆಗಟ್ಟುವ ಸಂಬಂಧ ಪ್ರಸ್ತುತ ವರ್ಷ ಅಧಿಕಾರಿ/ಸಿಬ್ಬಂದಿಗಳ ಸಾಮರ್ಥ್ಯಾಭಿವೃದ್ಧಿ ತರಬೇತಿ ಆಯೋಜಿಸಲು ಸರ್ಕಾರದ ಆದೇಶದಂತೆ ಸ್ವಯಂ ಸೇವಾ ಸಂಘದೊಂದಿಗೆ ಒಡಂಬಡಿಕೆ ಮಾಡಿಕೊಂಡು ಕ್ರಮವಹಿಸಲಾಗುತ್ತಿದೆ.

- ಲೈಂಗಿಕ ದೌರ್ಜನ್ಯಕ್ಕೊಳಗಾದ ಸಂತ್ರಸ್ಥ ಮಗುವಿಗೆ ಕಾನೂನು ಸಲಹೆ ಮತ್ತು ಆಪ್ತ ಸಮಾಲೋಚನೆಗಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಬೆಂಬಲ ವ್ಯಕ್ತಿಗಳನ್ನು ನೇಮಿಸಲು ಕ್ರಮವಹಿಸಲಾಗಿದೆ.

| | | |
|---|---|---|
| ಇ) | ಮಕ್ಕಳ ರಕ್ಷಣೆಗೆ ಇರುವಂತ ಕಾನೂನಿನ ಅರಿವನ್ನು ಪ್ರೌಢ ಶಿಕ್ಷಣದಿಂದಲೇ ಮಕ್ಕಳಿಗೆ ಪಾಠಗಳ ಮೂಲಕ ತಿಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ: | ಹೌದು. |
| ಈ) | ಪ್ರಸ್ತುತ ಇರುವ ಪೋಕ್ಸೊ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆಯಡಿಯಲ್ಲಿ ದಾಖಲಾಗಿರುವ ಪ್ರಕರಣಗಳು ಎಷ್ಟು; ಇದರಲ್ಲಿ ಇತ್ಯರ್ಥವಾಗದೇ ಬಾಕಿ ಇರುವ ಪ್ರಕರಣಗಳು ಎಷ್ಟು; ಇಂತಹ ಪ್ರಕರಣಗಳನ್ನು ತ್ವರಿತಗತಿಯಲ್ಲಿ ನಡೆಯುವಂತೆ ನೋಡಿಕೊಳ್ಳಲು ಯಾವ ಅಧಿಕಾರಿಗಳಿಗೆ ವಹಿಸಲಾಗಿದೆ: | **ಬಾಲ್ಯವಿವಾಹ ನಿಷೇಧ ಕಾಯ್ದೆ, ಮತ್ತು ಪೋಕ್ಸೊ ಕಾಯ್ದೆ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳು:**<br><br>ವಿಷಯ \| 2021-22 \| 2022-23 \| 2023-24<br>ಪೋಕ್ಸೊ \| 867 \| 1078 \| 1240<br>ಬಾಲ್ಯವಿವಾಹ \| 418 \| 328 \| 719<br><br>ಜಿಲ್ಲಾವಾರು ವಿವರವನ್ನು **ಅನುಬಂಧ-1** ಒದಗಿಸಿದೆ.<br><br>ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳನ್ನು ಸರ್ಕಾರಿ ಅಭಿಯೋಜಕರು ಮತ್ತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ನಿರ್ವಹಿಸುತ್ತಾರೆ. |
| ಉ) | ಬಾಲ್ಯ ವಿವಾಹ ಮತ್ತು ದೌರ್ಜನ್ಯಗಳನ್ನು ತಡೆಯಲು ಹಾಗೂ ಕ್ರಮ ತೆಗೆದುಕೊಳ್ಳಲು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳನ್ನು ಒಳಗೊಂಡಂತೆ ಬೇರೆ ಇಲಾಖೆಯ ಅಧಿಕಾರಿಗಳನ್ನು ನೇಮಿಸಲಾಗಿದೆಯೇ: ಹಾಗೂ ಅವರ ಕ್ರಮ ಕೈಗೊಳ್ಳಲು ಅಧಿಕಾರ ಇದೆಯೇ? | ಹೌದು,<br>ಬಾಲ್ಯವಿವಾಹ ಮತ್ತು ದೌರ್ಜನ್ಯಗಳನ್ನು ತಡೆಯಲು ಹಾಗೂ ಕ್ರಮ ತೆಗೆದುಕೊಳ್ಳಲು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/ ಮಕ್ಕಳ ರಕ್ಷಣಾ ನಿರ್ದೇಶನಾಲಯ ಅಧಿಕಾರಿಗಳನ್ನು ಒಳಗೊಂಡಂತೆ ಈ ಕೆಳಕಂಡ ಇಲಾಖೆಯ ಅಧಿಕಾರಿಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು (CMPOs) ನೇಮಿಸಲಾಗಿದೆ.<br>• ಕಂದಾಯ ಇಲಾಖೆ<br>• ಕಾರ್ಮಿಕ ಇಲಾಖೆ<br>• ಶಿಕ್ಷಣ ಇಲಾಖೆ<br>• ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>• ಒಳಾಡಳಿತ ಇಲಾಖೆ<br>• ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ<br>• ಸಮಾಜ ಕಲ್ಯಾಣ ಇಲಾಖೆ<br><br>ಮೇಲಿನ ಎಲ್ಲಾ ಇಲಾಖೆಗಳ ಸಂಬಂಧಿಸಿದ ಅಧಿಕಾರಿಗಳು ಬಾಲ್ಯವಿವಾಹ ನಿಷೇಧ ಕಾಯ್ದೆ 2006 ರ ಪ್ರಕಾರ ಕ್ರಮಕೈಗೊಳ್ಳಲು ಅಧಿಕಾರವಿರುತ್ತದೆ. |

ಮಮಇ 188 ಮಭಾಬ 2024

**(ಲಕ್ಷ್ಮೀ ಆರ್. ಹೆಬ್ಬಾಳ್ಕರ್)**
ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

ಅನುಬಂಧ-1

| ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ನಡೆದ ಬಾಲ್ಯವಿವಾಹ ಪ್ರಕರಣಗಳ ಮಾಹಿತಿ | | | | |
|---|---|---|---|---|
| | | 2021-22 | 2022-23 | 2023-24 |
| ಕ್ರ.ಸಂ | ಜಿಲ್ಲೆಯ ಹೆಸರು | ಬಾಲ್ಯವಿವಾಹ ಪ್ರಕರಣಗಳು ನಡೆದ ಸಂಖ್ಯೆ | ಬಾಲ್ಯವಿವಾಹ ಪ್ರಕರಣಗಳು ನಡೆದ ಸಂಖ್ಯೆ | ಬಾಲ್ಯವಿವಾಹ ಪ್ರಕರಣಗಳು ನಡೆದ ಸಂಖ್ಯೆ |
| 1 | ಬಾಗಲಕೋಟೆ | 39 | 28 | 19 |
| 2 | ಬೆಂಗಳೂರು (ಗ್ರಾ) | 8 | 5 | 8 |
| 3 | ಬೆಂಗಳೂರು (ನ) | 13 | 7 | 10 |
| 4 | ಬೆಳಗಾವಿ | 16 | 16 | 22 |
| 5 | ಬಳ್ಳಾರಿ | 17 | 7 | 9 |
| 6 | ಬೀದರ್ | 0 | 0 | 7 |
| 7 | ವಿಜಯಪುರ | 27 | 17 | 35 |
| 8 | ಚಾಮರಾಜನಗರ | 5 | 3 | 52 |
| 9 | ಚಿಕ್ಕಬಳ್ಳಾಪುರ | 27 | 7 | 13 |
| 10 | ಚಿಕ್ಕಮಗಳೂರು | 17 | 8 | 6 |
| 11 | ಚಿತ್ರದುರ್ಗ | 9 | 5 | 84 |
| 12 | ದಕ್ಷಿಣ ಕನ್ನಡ | 1 | 0 | 0 |
| 13 | ದಾವಣಗೆರೆ | 6 | 6 | 6 |
| 14 | ಧಾರವಾಡ | 10 | 6 | 12 |
| 15 | ಗದಗ | 2 | 2 | 1 |
| 16 | ಕಲಬುರ್ಗಿ | 6 | 5 | 2 |
| 17 | ಹಾಸನ | 39 | 10 | 3 |
| 18 | ಹಾವೇರಿ | 0 | 1 | 4 |
| 19 | ಕೊಡಗು | 3 | 2 | 3 |
| 20 | ಕೋಲಾರ | 6 | 8 | 80 |
| 21 | ಕೊಪ್ಪಳ | 0 | 1 | 2 |
| 22 | ಮಂಡ್ಯ | 76 | 62 | 66 |
| 23 | ಮೈಸೂರು | 33 | 36 | 70 |
| 24 | ರಾಯಚೂರು | 12 | 6 | 3 |
| 25 | ರಾಮನಗರ | 11 | 13 | 25 |
| 26 | ಶಿವಮೊಗ್ಗ | 18 | 51 | 79 |
| 27 | ತುಮಕೂರು | 11 | 10 | 19 |
| 28 | ಉಡುಪಿ | 0 | 0 | 4 |
| 29 | ಉತ್ತರ ಕನ್ನಡ | 1 | 1 | 0 |
| 30 | ಯಾದಗಿರಿ | 5 | 2 | 3 |
| 31 | ವಿಜಯನಗರ | 0 | 3 | 72 |
| ಒಟ್ಟು | | **418** | **328** | **719** |

| ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ವರದಿಯಾದ ಪೋಕ್ಸೋ ಪ್ರಕರಣಗಳ ಮಾಹಿತಿ | | | | |
|---|---|---|---|---|
| | | 2021-22 | 2022-23 | 2023-24 |
| ಕ್ರ.ಸಂ | ಜಿಲ್ಲೆಯ ಹೆಸರು | ಪೋಕ್ಸೋ ಪ್ರಕರಣಗಳು ವರದಿಯಾದ ಸಂಖ್ಯೆ | ಪೋಕ್ಸೋ ಪ್ರಕರಣಗಳು ವರದಿಯಾದ ಸಂಖ್ಯೆ | ಪೋಕ್ಸೋ ಪ್ರಕರಣಗಳು ವರದಿಯಾದ ಸಂಖ್ಯೆ |
| 1 | ಬಾಗಲಕೋಟೆ | 7 | 27 | 33 |
| 2 | ಬೆಂಗಳೂರು (ಗ್ರಾ) | 50 | 58 | 50 |
| 3 | ಬೆಂಗಳೂರು (ನ) | 12 | 26 | 23 |
| 4 | ಬೆಳಗಾವಿ | 26 | 36 | 33 |
| 5 | ಬಳ್ಳಾರಿ | 19 | 14 | 12 |
| 6 | ಬೀದರ್ | 19 | 33 | 32 |
| 7 | ವಿಜಯಪುರ | 21 | 17 | 26 |
| 8 | ಚಾಮರಾಜನಗರ | 50 | 51 | 51 |
| 9 | ಚಿಕ್ಕಬಳ್ಳಾಪುರ | 74 | 94 | 119 |
| 10 | ಚಿಕ್ಕಮಗಳೂರು | 11 | 2 | 10 |
| 11 | ಚಿತ್ರದುರ್ಗ | 57 | 66 | 49 |
| 12 | ದಕ್ಷಿಣ ಕನ್ನಡ | 53 | 61 | 79 |
| 13 | ದಾವಣಗೆರೆ | 28 | 24 | 31 |
| 14 | ಧಾರವಾಡ | 18 | 10 | 15 |
| 15 | ಗದಗ | 17 | 37 | 28 |
| 16 | ಕಲಬುರ್ಗಿ | 10 | 10 | 19 |
| 17 | ಹಾಸನ | 15 | 12 | 61 |
| 18 | ಹಾವೇರಿ | 30 | 38 | 34 |
| 19 | ಕೊಡಗು | 3 | 8 | 6 |
| 20 | ಕೋಲಾರ | 19 | 39 | 40 |
| 21 | ಕೊಪ್ಪಳ | 8 | 9 | 16 |
| 22 | ಮಂಡ್ಯ | 24 | 32 | 36 |
| 23 | ಮೈಸೂರು | 44 | 93 | 73 |
| 24 | ರಾಯಚೂರು | 21 | 15 | 35 |
| 25 | ರಾಮನಗರ | 53 | 43 | 91 |
| 26 | ಶಿವಮೊಗ್ಗ | 68 | 92 | 120 |
| 27 | ತುಮಕೂರು | 33 | 28 | 21 |
| 28 | ಉಡುಪಿ | 18 | 33 | 34 |
| 29 | ಉತ್ತರ ಕನ್ನಡ | 41 | 45 | 34 |
| 30 | ಯಾದಗಿರಿ | 9 | 8 | 14 |
| 31 | ವಿಜಯನಗರ | 9 | 17 | 15 |
| ಒಟ್ಟು | | **867** | **1078** | **1240** |

| ಅನುಬಂಧ-2 | | | |
|---|---|---|---|
| ವಿಧಾನ ಪರಿಷತ್ತಿನ ಸದಸ್ಯರ ಹೆಸರುಶ್ರೀ ಗೋವಿಂಧ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಪ್ರಶ್ನೆ ಸಂಖ್ಯೆ 515(633)ಕ್ಕೆ ಅನುಬಂಧ | | | |
| **ಕ್ರ.ಸಂ** | **ಜಿಲೆ** | **ಅರಿವು ಮತ್ತು ತರಬೇತಿ ಕಾರ್ಯಕ್ರಮ ನಡೆಸಿದ ಸಂಖ್ಯೆ** | **ಒಟ್ಟು ಭಾಗವಹಿಸಿದವರ ಸಂಖ್ಯೆ** |
| 1 | ಬಾಗಲಕೋಟೆ | 16 | **4864** |
| 2 | ಬೆಂಗಳೂರು ನಗರ | 14 | **4060** |
| 3 | ಬೆಂಗಳೂರು ಉತ್ತರ | 12 | **3150** |
| 4 | ಬೆಂಗಳೂರು ದಕ್ಷಿಣ | 9 | **2015** |
| 5 | ಬೆಂಗಳೂರು ಪೂರ್ವ | 12 | **3864** |
| 6 | ಬೆಂಗಳೂರು ಪಶ್ಚಿಮ | 10 | **5604** |
| 7 | ಬೆಂಗಳೂರು (ಗ್ರಾ) | 19 | **12650** |
| 8 | ಬೆಳಗಾವಿ | 23 | **12685** |
| 9 | ಬಳ್ಳಾರಿ | 18 | **8650** |
| 10 | ಬೀದರ್ | 22 | **16650** |
| 11 | ಚಿಕ್ಕಬಳ್ಳಾಪುರ | 25 | **26860** |
| 12 | ಚಿಕ್ಕಮಗಳೂರು | 15 | **9160** |
| 13 | ವಿಜಯಪುರ | 17 | **14650** |
| 14 | ಚಾಮರಾಜನಗರ | 19 | **18960** |
| 15 | ಚಿತ್ರದುರ್ಗ | 22 | **11200** |
| 16 | ದಾವಣಗೆರೆ | 35 | **52894** |
| 17 | ಧಾರವಾಡ | 25 | **19250** |
| 18 | ಗದಗ | 9 | **5540** |
| 19 | ಕಲಬುರಗಿ | 24 | **20540** |
| 20 | ಹಾಸನ | 20 | **25645** |
| 21 | ಹಾವೇರಿ | 35 | **62546** |
| 22 | ಉತ್ತರಕನ್ನಡ | 26 | **11860** |
| 23 | ಕೊಡಗು | 17 | **12646** |
| 24 | ಕೋಲಾರ | 22 | **15680** |
| 25 | ಕೊಪ್ಪಳ | 19 | **12650** |
| 26 | ಮಂಡ್ಯ | 23 | **16540** |
| 27 | ದಕ್ಷಿಣ ಕನ್ನಡ | 16 | **16786** |
| 28 | ಮೈಸೂರು | 25 | **20650** |
| 29 | ರಾಯಚೂರು | 23 | **26850** |
| 30 | ರಾಮನಗರ | 21 | **18650** |
| 31 | ಶಿವಮೊಗ್ಗ | 33 | **28650** |
| 32 | ತುಮಕೂರು | 25 | **19820** |
| 33 | ಉಡುಪಿ | 23 | **15860** |
| 34 | ಯಾದಗಿರಿ | 9 | **5620** |
| 35 | ವಿಜಯನಗರ | 14 | **11650** |
| | | **697** | **575349** |